ತಾರೀಖು 13ನೆ ಫೆಬ್ರವರಿ 1907.

ನಂ. ರೆ. 7493--ಫಾರೆಸ್ಟ್ಸ್ 24-06—10, ಈ ಇಸ್ತಿಹಾರ್ನಾಮೆಯ ಮೂಲಕ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಗಂಧದ ಮರಗಳಿಗೆ ಬರುವ ಸ್ಪೈಕ್ ರೋಗದ ಕಾರಣವನ್ನು ಕಂಡು ಹಿಡಿದು ಅದನ್ನೆ ಸಮೂಲವಾಗಿ ನಾಶಮಾಡುವುದಕ್ಕೆ ಪ್ರಬಲವಾಗಿಯೂ, ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕುದಾಗಿಯೂ ಇರುವ ಔಷಧವನ್ನು ತಿಳಿಸುವವರಿಗೆ ಮೈಸೂರು ಶ್ರೀಮ॥ ಮಹಾರಾಜರವರ ಸರ್ಕಾರದವರು ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು ಕೊಡಲು ಸಿದ್ಧವಾಗಿರುತ್ತಾರೆ. ಈ ಬಹುಮಾನವು ಈ ಇಸ್ತಿಹಾರ್ನಾಮೆಯ ತಾರೀಖಿನಿಂದ ಮೂರು ವರ್ಷಗಳೊಳಗೆ ಯಾವಾಗಲಾದರೂ ಪಡೆಯತಕ್ಕುದಾಗಿರುತ್ತದೆ.

2. ಮೇಲೆ ಕಂಡ ಬಹುಮಾನವನ್ನು ಅಪೇಕ್ಷಿಸುವ ಪ್ರತಿಯೊಬ್ಬರೂ ತಾವು ಕೋಧನೆ ಮಾಡಿದುದರ ರಿಪೋರ್ಟನ್ನು, ಸೂಕ್ಷ್ಮದರ್ಶಿಯಲ್ಲಿ ಪರೀಕ್ಷಿಸುವುದಕ್ಕಾಗಿ ಪದಾರ್ಥಗಳ ಚಿತ್ರಗಳಿರುವ ಕನಡಿಗಳು, ನಕ್ಷೆಗಳು ಮೊದಲಾದುವುಗಳೊಡನೆ, ಮೈಸೂರು ಶ್ರೀಮ॥ ಮಹಾರಾಜರವರ ಸರ್ಕಾರದ ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರಿಟೆರಿಯವರಿಗೆ ಕಳುಹಿಸಬೇಕು. ಈ ಬಹುಮಾನ ಪಡೆಯುವುದಕ್ಕೆ ತರುವ ಯಾವ ವಿನ್ನಹವನ್ನೂ, ಅಂಗೀಕರಿಸುವುದಕ್ಕೂ ಮೊದಲು ಈ ಕೆಳಗಿನ ಷರತ್ತುಗಳನ್ನು ನೆರವೇರಿಸಿರಬೇಕು :—

(1) ರೋಗದ ಕಾರಣವನ್ನು ನಿರ್ಣಯವಾಗಿಯೂ ಸ್ಪಷ್ಟವಾಗಿಯೂ ಗೊತ್ತುಮಾಡಿರಬೇಕು.

(2) ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕುದಾಗಿಯೂ ಇರುವ ಒಂದು ಔಷಧವನ್ನು ಹೇಳಿರಬೇಕು.

(3) ಆ ಔಷಧವು, ರೋಗ ಹರಡಿಕೊಳ್ಳುವುದನ್ನು ಒಂದು ವರ್ಷದೊಳಗಾಗಿ ಖಂಡಿತವಾಗಿ ನಿಲ್ಲಿಸುವಂಥಾದ್ದಾಗಿರಬೇಕು.

ಎಲ್ಲಾ ವಿನ್ನಹಗಳನ್ನೂ, ಸರ್ಕಾರದವರು ನೇಮಿಸುವ ಜಂಗಲಿ ಅಧಿಕಾರಿಗಳೂ ಸೇರಿ ಈ ವಿಷಯವನ್ನು ವಿಶೇಷವಾಗಿ ಪರಿಶೋಧಿಸಿರುವ ಮೂವರು ಪಂಡಿತರಿಗೆ ಕಡಮೆಯಿಲ್ಲದ ಒಂದು ಸಭೆಗೆ, ತೀರ್ಪನ ಬಗ್ಗೆ ಒಪ್ಪಿಸಲಾಗುವುದು; ಆ ಸಭೆಯ ಅಥವಾ ಅಲ್ಲಿನವರ ಪೈಕಿ ಹೆಚ್ಚು ಸಂಖ್ಯೆಯವರ ತೀರ್ಪೇ ಕಡೆಯದಾಗಿರುವುದು.

3. ಈ ವಿಷಯವನ್ನು ಕೋಧನೆ ಮಾಡಲು ಇಷ್ಟವುಳ್ಳವರು, ಸ್ಪೈಕ್ ರೋಗವನ್ನು ನಿರ್ಮೂಲಮಾಡುವ ವಿಷಯವನ್ನು ಕುರಿತ ಮುಖ್ಯವಾದ ಮತ್ತು ಉಪಯೋಗವಾದ ಕಾಗದ ಪತ್ರಗಳನ್ನು ಸಂಗ್ರಹಿಸಿ ಒಟ್ಟಾಗಿ ಅಚ್ಚು ಹಾಕಿರುವ ಪುಸ್ತಕದ ಪ್ರತಿಗಳನ್ನು ಮೈಸೂರು ಜಂಗಲಿ ಕಾರ್ಯಸರ್ವೇಟರಿಂದ ಪಡೆಯಬಹುದು.

ಹುಕುಂ ಬಮೋಜೇಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 28ನೆ ಫೆಬ್ರವರಿ 1907.

ನಂ. 182-1478, ಹಾಸನ ಡಿವೀಜನ್ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ॥ ಎಫ್. ಎ. ಸ್ಟೀಲ್ ಯವರಿಗೆ 1907ನೆ ಫೆಬ್ರವರಿ 11ನೆ ತಾರೀಖಿನಿಂದ 15 ದಿವಸಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 1ನೆ ಮಾರ್ಚಿ 1907.

ನಂ. 187-1541, ಚಿತ್ರದುರ್ಗ ಡಿವೀಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ॥ ಕೆ. ಪ್ರಹ್ಲಾದ್ ರಾವ್ ಯವರಿಗೆ 1907ನೆ ಮಾರ್ಚಿ 4ನೆ ತಾರೀಖಿನಿಂದ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೇಬ್,
ಬರ್ನ್ಹರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರಿಟೆರಿ.